Reg No. B G 155 7-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೊಂಬಾಯಿನಲ್ಲಿ ಭಾರಿ ಮೊತ್ತದ ಆಕ್ರಮ ವಸ್ತುವಶ

ಮಂತ್ರಿ ಮನೆ ಮೇಲೆ ಬಾಂಬು

ಹೈದರಾಬಾದು— ಸಂಪರ್ಕ ಮಂತ್ರಿ ಶ್ರೀ ನರಸಿಂಗರಾವ್‌ರ ಮನೆ ಮೇಲೆ ಒಂದು ದೇಶೀಯ ತಯಾರಿಕಾ ಬಾಂಬು ಎಸೆಯಲ್ಪಟ್ಟು ಕಿಟಕಿಗೆ ತಗಲು ಭೀಕರ ಶಬ್ದವಾಯಿತು – ಕಂದಾಯ ಮಂತ್ರಿ ಶ್ರೀ ರಾಜುರವರು ಕಚೇರಿಗೆ ಬರುತ್ತಿದ್ದಾಗ ಅವರ ಕಾರಿಗೆ ಕಲ್ಲು ಬೀರಲಾಯಿತು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಜಾಮರಾಜಪುರಂ, ಮೈಸೂರು 4.

ಗರ್ಭಪಾತಕರ ರಾಜಧಾನಿ

ಲಂಡನ್— ಲಂಡನ್ ವಿಶ್ವದ ಗರ್ಭಪಾತ ರಾಜಧಾನಿಯಾಗಿ ಪರಿಣಮಿಸಿದೆ : ಇಲ್ಲಿ ಗರ್ಭಪಾತ ನ್ಯಾಯಸಮ್ಮತವಾಗಿರುವುದರಿಂದ ವಿದೇಶೀ ಮಹಿಳೆಯರು ಈ ಕಾರ್ಯಕ್ಕಾಗಿ ಬರುವುದು ಹೆಚ್ಚಿದೆ : 14 ತಿಂಗಳ ಹಿಂದೆ ಗರ್ಭಪಾತವು ನ್ಯಾಯಬದ್ಧವಾದಾರಭ್ಯ ಕಳೆದ ಡಿಸೆಂಬರುನವರೆಗೆ ಶೇಕಡ 5 ವಿದೇಶೀಯರಿದ್ದುದು, ಈ ಜನವರಿ 1 ರಿಂದ ವಾರಕ್ಕೆ 100 ರಿಂದ 200 ಕ್ಕೆ ಹೆಚ್ಚಿದೆ ; ಅಮೇರಿಕಾ, ಕನಡಾ, ಜರ್ಮನಿ ಮತ್ತಿತರ ಯೂರೋಪ್ರ ದೇಶೀಯ ಮಹಿಳೆಯರು ಆಗಮಿಸುತ್ತಿದ್ದಾರೆ – ವಿಮಾನದಿಂದ ಇಳಿದೊಡನೆ ಗರ್ಭಪಾತ ಚಿಕಿತ್ಸಾಲಯಗಳಿಗೆ ಕರೆದೊಯ್ಯಲು ಸಂಸ್ಥೆಗಳಿವೆ.

ಬ್ಯಾಂಕು ಹಣದ ಉಪಯೋಗ

ಂಗಳೂರು— ಬ್ಯಾಂಕು ಡಿಪಾಜಿಟ್ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸುವ ಬಗ್ಗೆ ಪರ್ಯಾಲೋಚಿಸಲು ಸರಕಾರವು ಒಂದು ಉನ್ನತಮಟ್ಟದ ಸಮಿತಿಯನ್ನು ನೇಮಿಸಿದೆ.

ಕೈಗಡಿಯಾರ ಮತ್ತು ಹಣ ವಶ

ಬೊಂಬಾಯಿ— ಭಿವಾಂಡಿ ಹತ್ತಿರ ಕೇಂದ್ರದ ಎಕ್ಸೈಸಿನವರು ಒಂದು ಟ್ರಕ್ ನಿಂದ ರೂ 20 ಲಕ್ಷವನ್ನು ವಿದೇಶೀ ಕೈಗಡಿಯಾರಗಳು ಮತ್ತು ಭಾರತದ ಹಣವನ್ನು ವಶಪಡಿಸಿಕೊಂಡರು.

ಗಾಂಧೀಜೀ ದತ್ತೂ ಮೊಮ್ಮಗಳು

ನವದೆಹಲಿ— ದಕ್ಷಿಣ ಆಫ್ರಿಕಾದಲ್ಲಿ ನುಹಾತ್ಮಾ ಗಾಂಧಿಯವರ ದತ್ತೂ ಮೊಮ್ಮಗಳಾದ ಮಿಸ್ ಶಾಂತಾ ನಾಯ್ಡುರನ್ನು ತಿಲಿನ "ಟಿರರಿಸ್ಟ್" ಶಾಸನ ಪ್ರಕಾರ ಬಂಧಿಸಲಾಗಿದೆ.

ಜಾಕ್‌ಪಾಟ್

ಬೆಂಗಳೂರು— ನಿನ್ನೇ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲಿನಲ್ಲಿ 7 ಟಿಕೀಟುಗಳಿಗೆ ತಲಾ ರೂ. 134205 ದೊರೆತವು.

ಸಿ ಬಿ ಐ ಪ್ರಯತ್ನದಿಂದ

ನವದೆಹಲಿ— ಮೋಟಾರು ವಾಹನಗಳ ನ್ಯಾಯಬಾಹಿರ ವ್ಯಾಪಾರ ಸಂಬಂಧದಲ್ಲಿ ಸಿ ಬಿ ಐ ತನಿಖೆಯಿಂದ ಇಬ್ಬರು ಪಾರ್ಲಿಮೆಂಟು ಸದಸ್ಯರು ಮತ್ತು ಒಬ್ಬ ಬ್ರಿಗೇಡಿಯರಿಗೆ ಶಿಕ್ಷೆ ವಿಧಿಸಲಾಯಿತು.

ಇಪೊಂದು ಹುಚ್ಚು

ನವದೆಹಲಿ— ಕಾಶ್ಮೀರದಲ್ಲಿ ವಿನಾಶಕಾರಿ ಕೃತ್ಯಗಳನ್ನು ನಡೆಸಲು ಪಾಕಿಸ್ತಾನವು ಒಂದು ಗುರಿಲಾ ಪಡೆ ಏರ್ಪಡಿಸುವುದೆಂದು ಒಂದು ಪಾಕಿಸ್ತಾನ ಪತ್ರಿಕೆ ಪ್ರಕಟಿಸಿದೆ

ಫೇರಾವೋ ತಂದ ಲಾಭ

ತ್ರಿವೇಂದ್ರಂ— ಕರಿಪಾಡಿ ಭೂಸ್ವಾಮಿ ಸುಂದರಂ ತಮ್ಮ ಭೂಮಿಯ ಸ್ವಲ್ಪ ಭಾಗವನ್ನು ಮಾರಲಿದ್ದರು — ಮಾರ್ಕ್ಸಿಸ್ಟ್ ಆಳರನ್ನು ಫೇರಾವೋ ಮಾಡಿ ಕ್ರಯಪತ್ರ ವಾಗಲು ಅಡ್ಡಿ ಪಡಿಸಿದರು – ಪೋಲೀಸಿನವರೊಬ್ಬರು ಬಂದು ಸಮಾಧಾನ ಮಾಡಿ ಭೂಮಿಯಿಲ್ಲದ ಕಾರ್ಮಿಕನೊಬ್ಬನಿಗೆ ಆವರಿಂದ ಸ್ವಲ್ಪ ಭೂಮಿ ಕೊಡಿಸಿದರು.

ಪ್ರಸಿದ್ಧ ಪೂರಿ ರಥೋತ್ಸವ

ಭುವನೇಶ್ವರ— ಜಗನ್ನಾಥ, ಬಲರಾಮ, ಸುಭದ್ರೆಯವರ ಹೊಸ ವಿಗ್ರಹಗಳು ತಾ॥ 15 ರಂದು ಪ್ರತಿಷ್ಠಾಪನೆಯಾಗುವವು – ಮಾರನೇ ದಿನ ಪ್ರಸಿದ್ಧ ಪೂರಿ ರಥೋತ್ಸವ ನಡೆಯುವುದು – 12 ವರ್ಷಗಳಿಗೆ

ಬೆಂಗಳೂರಿಗೆ ಬಂದ್!

ಬೆಂಗಳೂರು—ಕೇಂದ್ರ ಸರಕಾರವನ್ನು ಮಹಾಜನ ಕಮಿಷನ್ ವರದಿಯನ್ನು ಕೂಡಲೇ ಜಾರಿಗೆ ತರುವಂತೆ ಒತ್ತಾಯ ಮಾಡಲು ಕನ್ನಡ ಚಳವಳಿಗಾರರು ತಾ ॥ 10 ರಂದು ಬೆಂಗಳೂರು ಬಂದ್ ನಡೆಸುವದು ಖಂಡಿತವಂತೆ.

★ ಹೈದರಾಬಾದಿನಲ್ಲಿ ಸುಂಡಿನೇಟಿನಿಂದ ಇಬ್ಬರು ಸತ್ತಿದ್ದಾರೆ.

ತೆಲಂಗಾಣಾ

ಹೈದರಾಬಾದು— ಪೋಲೀಸರ ದಬ್ಬಾಳಿಕೆ ಪ್ರತಿಭಟಿಸಿ ತೆಲಂಗಾಣಾ ಪ್ರಜಾಸಮಿತಿ ಇಂದು ಬಂದ್‌ಗೆ ಕರೆಯಿತ್ತಿದೆ – ನಿನ್ನೆ ಶಾಸನಸಭೆಗೆ ಹೋಗುವ ಮಾರ್ಗಗಳಲ್ಲಿ ಗುಪ್ತಗುಂಪಾಗಿದ್ದ ಜನರನ್ನು ಚದುರಿಸಲು ಪೋಲೀಸರು ಲಾಠಿಚಾರ್ಜು ಮಾಡಿದರು – ತಮ್ಮ ಗಿರಾಕಿಗಳನ್ನು ಹೊಡೆಯಲು ಬಂದ ಪೋಲೀಸರ ಪ್ರವೇಶಕ್ಕೆ ಆಸ್ಪದವಾಗದಂತೆ ಹೋಟಲುಗಳೂ ಫಲಾಹಾರ ಮಂದಿರಗಳು ಮುಚ್ಚಲ್ಪಟ್ಟವು – ಎಜಿಟೇಟರುಗಳ ಉಪಾಧ್ಯಾಯರು, ಪೌರಸಭಾ ಸದಸ್ಯರು, ಮತ್ತಿತರ ಪುರುಷರೂ ಸ್ತ್ರೀಯರೂ ಬೇರೆಬೇರೆ ಸ್ಥಳಗಳಲ್ಲಿ 8 ಗಂಟೆ ಕಾಲದ ಉಪವಾಸಕ್ಕೆ ಕುಳಿತರು.

ಪಾರ್ಲಿಮೆಂಟಿನಲ್ಲಿ ತಮಿಳು

ಮದರಾಸು— ಪಾರ್ಲಿಮೆಂಟಿನಲ್ಲಿ ತಮಿಳು ಭಾಷೆಯನ್ನು ಜಾರಿಗೆ ತರಲು ಎಸ್ಸೆಸ್ಸಿ ಕಾರ್ಯದರ್ಶಿ ಶ್ರೀ ಜಾರ್ಜ್ ಫರ್ನಾಂಡಸ್ ಎಂ ಪಿ ಯವರು ತಮ್ಮ ಪಾರ್ಟಿಯು ಪಾರ್ಲಿಮೆಂಟಿಗೆ ಕೊಡಲು ಸಾಮೂಹಿಕ ಅರ್ಜಿ ತಯಾರಿಸುತ್ತದೆಂದೂ ಒಂದು ಮಿಲಿಯ ರುಜುಗಿಂತ ಹೆಚ್ಚು ಶೇಖರಿಸಲಾಗುವುದೆಂದೂ ಸೇಳಿದರು.

ಜೈ ತೆಲಂಗಾಣ, ಜೈ ಭಾರತ

ಹೈದರಾಬಾದು— ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರನ್ನು ಕಂಡ 100 ತೆಲಂಗಾಣಾ ಹುಡುಗಿಯರು ಅವರನ್ನು "ಜೈ ತೆಲಂಗಾಣಾ" ಎಂದು ಘೋಷಣೆ ಮಾಡಲು ಹೇಳಿದರು : ಅವರು 'ಜೈ ಭಾರತ್' ಎಂದು ಕೂಗಿದರು – ಅಧ್ಯಕ್ಷರ ಅಳ್ಳಿಕೆ ಜಾರಿಗೆ ತರಬೇಕೆಂದೂ ಪ್ರತ್ಯೇಕ ತೆಲಂಗಾಣಾ ಸ್ಥಾಪನೆಯಾಗಬೇಕೆಂದೂ, ಈ ಕೇಳಿಕೆಗಳು ನೆರವೇರುವವರೆಗೆ ತಳವಳಿ ತಗ್ಗದೇ ನಡೆಯುತ್ತಿರುವುದೆಂದೂ ಹುಡುಗಿಯರು ತಿಳಿಸಿದರು – ಇದನ್ನು ಹೈಕಮಾಂಡಿಗೆ ತಿಳಿಸುವದಾಗಿ ಅವರು ಹೇಳಿದರು.

ಸುತಶೈಷ್ಣ ಮಾಣಿಕ್ಯ ವಾಚಕರ'

[' ಲೇಖನ ಕಾಸೇರಿ ಯಿಂದ ']

[ಮುಂದುವರಿದುದು]

ಮಾರನೆಯ ಬೆಳಿಗ್ಗೆ ನೋಡಿದರೆ ನಟರಾಜನ ಗುಡಿಯ ಹೊಸ್ತಲ ಮೇಲೆ ಆ ಪುಸ್ತಕವಿತ್ತು. ಅದರಲ್ಲಿ ಒಂದು ತಪ್ಪೂ ಇಲ್ಲದೆ ಬರೆದ ಒಂದು ಸಾವಿರ ಹಾಡುಗಳಿದ್ದವು : ಕೊನೆಯಲ್ಲಿ ಸಾಕ್ಷಾತ್ ನಟರಾಜನ ಹಸ್ತಾಕ್ಷರ. ಅಲ್ಲಿದ್ದ ಬ್ರಾಹ್ಮಣ ಭಕ್ತರು ಪುಸ್ತಕವನ್ನು ಭಕ್ತಿಯಿಂದ ಕೈಗೆತ್ತಿಕೊಂಡು ಮಾಣಿಕ್ಯವಾಚಕರರ ಬಳಿಗೆ ಬಂದು ಹಾಡುಗಳ ಅರ್ಥವನ್ನು ಬಿಡಿಸಿ ಹೇಳಬೇಕೆಂದು ವಿನ್ನವಿಸಿಕೊಂಡರು. ಮಾಣಿಕ್ಯವಾಚಕರರು ಅವರನ್ನೆಲ್ಲಾ ಕರೆದುಕೊಂಡು ನಟರಾಜನ ಗುಡಿಗೆ ಬಂದರು. ಅಲ್ಲಿ ದೇವರ ಕಡೆ ಕೈ ತೋರಿಸಿ " ಈ ಸಭಾಪತಿಯೇ ಇದರ ಅರ್ಥ " ಎಂದರು. ಆಗ ಇದ್ದಕ್ಕಿದ್ದ ಹಾಗೆ ಎಲ್ಲರೂ ನೋಡನೋಡುತ್ತಿದ್ದಂತೆಯೆ ಆ ಹರಭಕ್ತ ಕಣ್ಮರೆಯಾಗಿ ತನ್ನ ಇಷ್ಟದೈವವಾದ ಶಿವನಲ್ಲಿ ಐಕ್ಯನಾಗಿಹೋದ. ಹೀಗೆ ಈ ಮಹಾನ್ ಶಿವಭಕ್ತ, ಸಂತಕವಿ ಶಿವಸಾಯುಜ್ಯ ಪಡೆದಾಗ ಆತನಿಗೆ 32 ವರ್ಷವಾಗಿತ್ತು.

ಹೀಗೆ ಸಾಕ್ಷಾತ್ ನಟರಾಜನ ಸ್ವಹಸ್ತಲಿಖಿತವಾದ ಕೃತಿಯೇ ' ತಿರುವಾಚಕಮ್ ". ತಮಿಳಿನಲ್ಲಿರುವ ಗಾಡ್ಡೆಯೊಂದು ಹೇಳುವಂತೆ ' ತಿರುವಾಚಕಕ್ಕೆ ಕರಗದ ಹೃದಯ ಮತ್ಯಾವುದಕ್ಕೂ ಕರಗದು '.

———

ಮೈಸೂರು— ಮಹಾರಾಜಾ ಕಾಲೇಜು ಶತಮಾನೋತ್ಸವ ಭವನದಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಚಿಕಿತ್ಸಾಲಯದಲ್ಲಿ ವಾಕ್‌ಶ್ರವಣ ದೋಷಗಳನ್ನು ಪರೀಕ್ಷಿಸಿ ಚಿಕಿತ್ಸೆ ನೀಡಲಾಗುವುದೆಂದು ಅದರ ಡೈರೆಕ್ಟರರು ತಿಳಿಸಿರುತ್ತಾರೆ.

ಕೇಪ್ ಕೆನಡಿ— ಬಹಿರಾಕಾಶದಲ್ಲಿ ಅಮೇರಿಕಾ ವಿಮಾನದಲ್ಲಿ ಸುತ್ತುತ್ತಿರುವ ಕೋತಿ ಒಂದು ವಾರದ ನಂತರ ಸ್ವಲ್ಪ ಸುಸ್ತಾಗಿರುವದಾಗಿ ಕಂಡುಬಂದಿದೆ.

ಕಾರವಾರ— ಪಿಡಬ್ಲ್ಯು ಡಿ ಸ್ಟೋರ್ಸಿನಲ್ಲಿ ಟೈರು ಮುಂತಾದುವು ಕಳುವಾಗುತ್ತಿದ್ದುದನ್ನು ಓರ್ವ ಪೋಲೀಸು ಸಬ್‌ಇನ್ಸ್‌ಪೆಕ್ಟರರು ಪತ್ತೆಹಚ್ಚಿರುವರು

ಶಿವಮೊಗ್ಗಾ— ಸಮಾರಂಭಗಳಿಗೆ ಮುಂದಾಗಿ ಸರ್ಕಾರದ ಅನುಮತಿ ಪಡೆಯದೆ ಯಾವ ಖರ್ಚನ್ನೂ ಪೌರಸಭೆ ಮಾಡಬಾರದೆಂಬ ವಿಭಾಗಾಧಿಕಾರಿಗಳ ಪ್ರಕಟಣೆಯು ಸಭೆಯಲ್ಲಿ ಟೀಕಿಸಲ್ಪಟ್ಟಿತು — ತನ್ನ ಎಲ್ಲಾ ಕಾರ್ಯಗಳನ್ನೂ ಕನ್ನಡದಲ್ಲಿ ನಡೆಸಲು ಸಭೆ ನಿರ್ಧರಿಸಿತು.



Protect the Cow

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ 4-7-69 ರಿಂದ

ಅಮೋಘ ಆರಂಭ

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿ ರಾತ್

ಸಂಗೀತ — ರೋರ್ಷ

ತಾರಾಗಣ : ಸಂಜೀವ ಕುಮಾರ್, ಜಹೀದ, ತರುಣ ಬೋಸ್ ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 2 ನೇ ವಾರ

— ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಕನ್ನಡ ಚಿತ್ರ —

ಮಕ್ಕಳ್ಳೇ ಮನೆಗೆ ಮಾಣಿಕ್ಯ

ನಟವರ್ಗ— ಉದಯಕುಮಾರ್, ಬಿ. ವಿ. ರಾಧಾ, ಆದವಾನಿ ಲಕ್ಷ್ಮಿ, ಶೈಲಶ್ರೀ, ಜಯ, ದಿನೇಶ್, ಮಾಸ್ಟರ್, ಕೃಷ್ಣಕುಮಾರ್, ಬೇಬಿ ಪ್ರತಾಂತ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarājapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited Printed & Published by Dharmaprachara Nirata V. S. Krishna Rao (Proprietor) at the Satyavadi Press Chamarajapuram, Mysore 4